ಲತಿಕಾ ಫೈಲುಗಳನ್ನು ನೋಡುತ್ತಾ ಹೇಳಿದಳು. ಆಟೋದಲ್ಲಿ ಹೋದರೆ ಅರ್ಧಗಂಟೆ. ಬಸ್ಸಿಗೆ ಹೋದರೂ ಹೆಚ್ಚುಕಡಿಮೆ ಅಷ್ಟೇ ಸಮಯ ಬೇಕು. ಬಸ್ಸಿನಿಂದ ಇಳಿದ ಮೇಲೆ ಸ್ವಲ್ಪ ನಡೆಯಬೇಕು. ಬಸ್ಸಿಗೋ ಆಟೊಗೂ ಕಾಯದೆ ಉರಿಬಿಸಿಲಿನಲ್ಲೇ ಹೊರಟೆ. ಪ್ರತಿಯೊಂದು ಹೆಜ್ಜೆಗೂ ಬೆವರು ಮತ್ತು ದಾಹ ಗಿರಿಧರನಿಗಿಂತಲೂ ಮುಂದೆ ಹೋಗುತ್ತಿತ್ತು.

ದೂರದಿಂದ ಮನೆಯನ್ನು ನೋಡುವಾಗ ಬಹಳ ಹೆಮ್ಮೆ ಅನಿಸ್ತಾ ಇತ್ತು. ಸ್ವಪ್ರಯತ್ನದಿಂದ ಕಟ್ಟಿಸಿದ ಆ ‘ಸ್ವಪ್ನ ಮಂದಿರ’ದ ಪ್ರತಿಯೊಂದು ಮೂಲೆಯನ್ನೂ ಸ್ವಚ್ಛವಾಗಿಡುವ ಕೆಲಸ ಬಿಡುವಿನ ದಿನಗಳ ಅಭ್ಯಾಸವಾಗಿತ್ತು. ಅಂಗಳದಲ್ಲಿ ಕೆಂಪು ತಾವರೆಗಳು ಅರಳುವ ಹೃದಯಾಕಾರದ ಒಂದು ಕೊಳ, ಒಳಗೆ ಬಂಗಾರ ಬಣ್ಣದ ಮೀನುಗಳು ಮಿಡಿಯುತ್ತಾ ಈಜುತ್ತಿರುವ ಅಕ್ವೇರಿಯಂ, ಸುವಾಸನೆಯನ್ನು ಸೂಸುತ್ತಾ ಅರಳುತ್ತಿರುವ ಮಲ್ಲಿಗೆ ಹೂವಿನ ಗಿಡಗಳು... ಮನೆಯನ್ನು ಅಲಂಕರಿಸುವುದನ್ನು ಗಿರಿಧರ್ ಒಂದು ಗೀಳಾಗಿಸಿಕೊಂಡಿದ್ದ.

ಗೇಟು ಅರ್ಧ ತೆರೆದಿದೆ. ಆ ರೀತಿ ಗೇಟು ತೆರೆದಿಡೋದು ತೀರ ಇಷ್ಟವಿಲ್ಲದ ಸಂಗತಿ. ಬೀಡಾಡಿ ಆಡುಗಳು, ದನಗಳು ಗೇಟಿನೊಳಗೆ ಬಂದು ಅಂಗಳವನ್ನು ಹಾಳುಗೆಡುವುದಕ್ಕಿಂತಲೂ ಒಂದು ಗೇಟನ್ನು ತೆರೆದಿಡುವುದು ಅಶಿಸ್ತಿನ ಸೂಚನೆಯೆಂದು ಗಟ್ಟಿಯಾಗಿ ಗಿರಿಧರ ನಂಬಿದ್ದ. ಗೇಟನ್ನು ಮುಚ್ಚಲಾಗದಿದ್ದಲ್ಲಿ ಗೇಟಿನ ಅವಶ್ಯಕತೆಯೇ ಇರುವುದಿಲ್ಲವಲ್ಲ ಎನ್ನುವುದು ಗಿರಿಧರನ ವಾದ.

ಬಾಗಿಲು, ಕಿಟಕಿ ಎಲ್ಲ ಮುಚ್ಚಿಕೊಂಡಿವೆ. ಉರಿಬಿಸಿಲಿನಲ್ಲಿ ಅಶ್ಲೀಲ ನಿಗೂಢತೆಯಿರುವಂತೆ ಅನಿಸಿತು.

ಕಾಲಿಂಗ್ ಬೆಲ್ಲಿನ ಮೇಲೆ ಬೆರಳನ್ನು ಒತ್ತುವಾಗಲೂ ಗಿರಿಧರ ಆಶ್ಚರ್ಯಕರ ರೀತಿಯಲ್ಲಿ ಪ್ರಶಾಂತನಾಗಿಯೇ ಇದ್ದ.

ಅವಳು ಬರುವುದಕ್ಕೆ ತಡವಾಗುತ್ತಿರುವುದನ್ನು ಬಹಳ ಸಮಾಧಾನದಿಂದಲೇ ಅರಿತುಕೊಂಡ.

ಬಾಗಿಲನ್ನು ತೆರೆದ ತಕ್ಷಣ ಒಂದು ಚಿಟಿಕೆ ಹೊಡೆಯುವಷ್ಟರಲ್ಲಿ ಅವಳ ಮುಖದಲ್ಲಿ ಕಂಡ ದಿಗ್ಭ್ರಾಂತ ಭಾವ, ಆಶ್ಚರ್ಯ, ಈರ್ಷ್ಯೆ, ಸಮಾಧಾನ ಎಲ್ಲವನ್ನೂ ಗಿರಿಧರ ಅರ್ಥಮಾಡಿಕೊಂಡ.

“ಇದೇನಿದು... ಇಷ್ಟು ಹೊತ್ತಿಗೆ...”

ಕಂಗಾಲಾಗಿ ಅವಳಾಡಿದ ಮಾತುಗಳಲ್ಲಿ ಖಂಡಿತವಾಗಿಯೂ ತನ್ನ ಬಗ್ಗೆ ಇರುವ ಆತಂಕ ಅಲ್ಲವೆನ್ನುವುದು ಮೊದಲು ಗಿರಿಧರನಿಗೆ ಅರ್ಥವಾಯಿತು.

